MYSORE LEGISLATIVE ASSEMBLY.

Thursday, 27th July 1961.

MOTION *RE*: FLOOD SITUATION IN THE MYSORE STATE, 1961.

(Debate continued).

[MR. SPEAKER in the Chair.]

3-5 P.M.

*ಶ್ರೀ ಆರ್. ಜಿ. ಕಾಮತ್ (ಅಂಕೋಲ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ಶ್ರೀ ಕಡಿದಾಳ್ ಮಂಜಪ್ಪನವರು ಈ ಸಭೆಯ ಮುಂದೆ ಇಟ್ಟಿರುವ ವರದಿಯನ್ನು ನೋಡಿದರೆ, ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಕಾಣಿಸಿರುವ ಮಜಕೂರುಗಳು ಬಹಳ ಕಡಮೆಯೇ ಇವೆ. ಉತ್ತರ ಕನ್ನಡ ಜಿಲ್ಲೆಗೆ ಆಗಿರುವ ನಷ್ಟಗಳ ಪರಿಸ್ಥಿತಿಗಳನ್ನು ತೆಗೆದುಕೊಂಡು ನೋಡಿದರೆ ಇದು ಬಹಳ ಕಡಮೆ ಇದೆ. ಏಕೆಂದರೆ ತಾವು ಜಿಲ್ಲಾಧಿಕಾರಿಗಳಿಂದ ಬಂದ ವರದಿಯ ಮೇಲೆ ಇಲ್ಲಿಗೆ ವರದಿಯನ್ನು ತಯಾರು ಮಾಡಿ ಕೊಡುವಾಗ ಇದರ ಬಗ್ಗೆ ಏಕೆ ಕೂಡಲಿಲ್ಲ ಎನ್ನುವುದಕ್ಕೆ ಕಾರಣಗಳನ್ನು ತಿಳಿಸಲಿಲ್ಲ. ಪಸ್ತುತಃ ಮೊಟ್ಟ ಮೊದಲು ಉತ್ತರ ಕನ್ನಡ ಜಿಲ್ಲೆಯಲ್ಲಿ ಅನಾಹುತಕ್ಕೆ ಒಳಗಾದ ಪ್ರದೇಶಗಳು ಹೆಚ್ಚು. ಅದರಲ್ಲೂ ನಮ್ಮ ಹಳ್ಳಿಯಾಳ ತಾಲ್ಲೂಕಿನಲ್ಲಿಸ್ಥಿತಿ ಹೇಗಿತ್ತು ಎನ್ನುವುದನ್ನು ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಸ್ವತಃ ಹೋಗಿ ನೋಡಿ ಬಂದಿದ್ದಾರೆ. ಆದರೂ ಈ ವರದಿಯಲ್ಲಿ ಇದರ ಬಗೆಗೆ ಏನೂ ಕಾಣುವುದಿಲ್ಲ. ಅಲ್ಲಲ್ಲಿ ಮೇ ತಿಂಗಳಿನಲ್ಲಿ ದೊಡ್ಡ ಮಳೆಯಾಗಿ ಅಲ್ಲಿ ಹರಿಯುವ ನಾಲೆಗಳ ನೀರು ಉಕ್ಕೇರಿ ಸಾಧಾರಣ 6000 ಎಕರೆಯಷ್ಟು ಭೂಮಿಯು ಹಾಳಾಗಿ ಹೋಗಿದೆ, ಹಾಗೂ 1200 ಎಕರೆಗಳಷ್ಟು ಭೂಮಿಯಲ್ಲಿ ಬೀಜ ಬಿತ್ತಿದ್ದುದು ಹಾಳಾಗಿ ಹೋಗಿದೆ. ಅದೇ ಪ್ರಕಾರ 27 ಕೆರೆಗಳು ಒಡೆದು ಹೋಗಿವೆ. ಹಾಗೂ ಈ ನಾಲೆಗಳ ಅವರಣದಲ್ಲಿದ್ದ ಎಷ್ಟೋ ಜನಗಳಿಗೆ ಎಂದರೆ ಕಂಟ್ರಾಕ್ಟು ಮಾಡುವ ಜನಗಳ ಸಾಮಾನುಗಳೆಲ್ಲವೂ ಹಾಳಾಗಿ ಹೋಗಿವೆ. ಆಮೇಲೆ ಜುಲೈ ತಿಂಗಳಿನಲ್ಲಿ ಅಂಕೋಲ ಕುಮಟಾ ತಾಲ್ಲೂಕುಗಳು, ಅದೇ ಪ್ರಕಾರ ಎಲ್ಲಾಪುರ, ಮುಂದಗೋಡು ಈ ಭಾಗಗಳಲ್ಲಿ ಹೆಚ್ಚಿನ ಮಳೆ ಬಂದುದರಿಂದ ಲಕ್ಷಾಂತರ ಜನಕ್ಕೆ ತೊಂದರೆಯಾಗಿದೆ. ಅಂಕೋಲಾದಿಂದ ನನಗೆ ಬಂದಿರುವ ವರದಿಯ ಪ್ರಕಾರ ನೋಡಿದರೆ ನುಮಾರು ಹತ್ತು ಸಾವಿರ ಜನರ ಮನೆ ಮಾರುಗಳೂ ಇಲ್ಲದೆ ಇದ್ದಾರೆ. ಇಂತಹ ಜನಗಳಿಗೆ ಈಗ ಅನ್ನ, ವಸತಿ ಸೌಕರ್ಯಗಳನ್ನು ಕೊಡಲಾಗುತ್ತಿದೆ. ನುಮಾರು ಒಂದು ಸಾವಿರ ಮನೆಗಳು ಹಾಳಾಗಿ ಹೋಗಿವೆ. ಇಂತಹ ಜನಕ್ಕೆ ಈಗ ಮನೆಯನ್ನು ಕಟ್ಟಿಕೊಳ್ಳುವುದಕ್ಕಾಗಿ ಮುನ್ನೂರು ಅಥವಾ ನಾಲ್ಕುನೂರು ರೂಪಾಯಿಗಳಷ್ಟಾದರೂ ಸಹಾಯವನ್ನು ಕೊಡಿ. ಅಂಕೋಲ ತಾಲ್ಲೂಕಿನ ವಿಚಾರ ಇದರಲ್ಲಿ ಕಾಣುವುದಿಲ್ಲ. ಇದು ನಮ್ಮ ಕ್ಷೇತ್ರದಲ್ಲಿರುವುದರಿಂದ ನಾನು ಹೇಳುತ್ತಿದ್ದೇನೆ. ಅತಿ ಹೆಚ್ಚಿನ ಅನಾಹುತಕ್ಕೆ ಒಳಗಾದ ಜಿಲ್ಲೆ ಎಂದರೆ ಉತ್ತರ ಕನ್ನಡ ಜಿಲ್ಲೆ. ಅದರಿಂದ ಇದರ ಕಡೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿರುವ ಹಾಗೆ ಇಲ್ಲಿ ಕಾಣುವುದಿಲ್ಲ. ಇದರ ಸಲುವಾಗಿ ಇಲ್ಲಿನ ಜನಕ್ಕೆ ಕೆಲಸ ದೊರೆಯಲು ಸಾಕಷ್ಟು ಕೆಲಸಗಳನ್ನು ಕೊಟ್ಟು ಸಹಾಯ ಮಾಡಬೇಕಾಗಿದೆ. ರೀ ಹ್ಯಾಬಿಲಿಟೇಷನ್ನು ಕೆಲಸಗಳನ್ನು ಇನ್ನೂ ತ್ವರಿತಗೊಳಿಸಿ ಹೆಚ್ಚಿನ ಸೌಕರ್ಯಗಳನ್ನು ಕೊಟ್ಟು ನಡೆಸಬೇಕಾಗಿದೆ. ಅಲ್ಲಿನ ಜನಕ್ಕೆ ಎಂಪ್ಲಾಯಿಮೆಂಟ್ ಬಹಳ ಅವಶ್ಯವಾಗಿ ಬೇಕಾಗಿದೆ. ಆದರೆ ಅಲ್ಲಿ ಕೆಲಸಗಳು ಸಿಕ್ಕುತ್ತಿಲ್ಲ. ಆದುದರಿಂದ ಈ ಹತ್ತು ಸಾವಿರ ಜನರಿಗೂ ಸಹಾಯ ಮಾಡಿ ಅವರು ಕುಳಿತುಕೊಂಡು ಊಟ ಮಾಡುವ ಹಾಗಾಗಿದೆ. ಅವರಿಗೆ ಕೆಲಸಗಳನ್ನು ಬೇಗನೆ ದೊರಕಿಸಿ ಕೊಟ್ಟರೆ ಸರಕಾರದ ಭಾರವೂ ಕಡಮೆಯಾಗುತ್ತದೆ. ಆದುದರಿಂದ ಈ ರಿಲೀಫ್ ವರ್ಕುಗಳನ್ನು ಇನ್ನಷ್ಟು ತೀವ್ರವಾಗಿ ಮಾಡುವುದಾದರೆ ಈ ಜನಕ್ಕೆ ಕೆಲಸ ಸಿಕ್ಕಿ ಅನುಕೂಲವಾಗುತ್ತದೆ. ರಸ್ತೆ ಕೆಲಸಗಳನ್ನು ಆರಂಭ ಮಾಡುವಾಗ ಈ ಜನರನ್ನು ಕೆಲಸಕ್ಕೆ ತೆಗೆದುಕೊಂಡು ಸಹಾಯ ಮಾಡುವುದು ಅವಶ್ಯವಾಗಿದೆ. ಅಲ್ಲದೆ ಈ ಮನೆ ಮಾರುಗಳನ್ನು ಕಳೆದುಕೊಂಡ ಜನಕ್ಕೆ ಮೂನ್ನೂರು ರೂಪಾಯಿಗಳಷ್ಟು ಎಂದು ಈಗ ಕೊಡಬೇಕೆಂದು ಹೇಳಿರುವುದು ಸಾಲದು. ಇದಕ್ಕೆ ಇನ್ನೂ ಹೆಚ್ಚಿಗೆ ಬೇಕಾಗುತ್ತದೆ. ಖಾಯಂ ಆಗಿ ಈ ಜನಕ್ಕೆ ಮನೆಗಳಿರುವುದು ಅವಶ್ಯಕ. ಅದರೆ ಈಗ ಮುನ್ನೂರು ರೂಪಾಯಿಗಳನ್ನು ಕೊಟ್ಟು ಮನೆಗಳನ್ನು ಮಾಡಿದರೆ ಅದರಲ್ಲಿ ನುಮಾರು ಒಂದು ತಿಂಗಳು ಕಾಲ ಇರಬಹುದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆ ಬಹಳ ಹೆಚ್ಚು. ಆದುದರಿಂದ ಈ ರೀತಿಯಾದ ಮುನ್ನೂರು ರೂಪಾಯಿಗಳಷ್ಟು ಮನೆಗಾಗಿ ಎಂದು ಸಹಾಯ ಕೊಟ್ಟರೆ ಅದರಲ್ಲಿ ಅವರು ಉಳಿಯಲಿಕ್ಕೆ ಶಕ್ಯವಿಲ್ಲ.

ಆ ದೃಷ್ಟಿಯಿಂದ ಮನೆಕಳೆದುಕೊಂಡು ಹೋಗಿರುವವರಿಗೆ ಹೆಚ್ಚಿನ ಸಹಾಯವನ್ನು ಕೊಡಬೇಕು. ಆ ರೀತಿ

*Asterisk indicates that the remarks or speeches have not been revised by the member concerned

(ಶ್ರೀ ಆರ್. ಜಿ. ಕಾಮತ್)

ಹೆಚ್ಚಿನ ಸಹಾಯವನ್ನು ಕೊಡುವಾಗ ಅಲ್ಲಿ ನಷ್ಟವಾಗಿರ ತಕ್ಕ ಪ್ರಮಾಣ ಎಷ್ಟು ಎಂಬುದನ್ನು ನೋಡಬೇಕಾಗಿದೆ. ಎಲ್ಲಾ ಪ್ರದೇಶಗಳಲ್ಲೂ ಎಲ್ಲಾ ಮನೆಗಳವರ ಪರಿಸ್ಥಿತಿ ಒಂದೇ ತರಹ ಇರುವುದಿಲ್ಲ. ಕೆಲವು ಕಡೆ ಬಹಳ ಬಡವರು ಇರುತ್ತಾರೆ. ಅಂತಹವರಿಗೆ ತಮ್ಮ ಕಾಲಿನ ಮೇಲೆ ತಾವು ನಿಂತುಕೊಳ್ಳುವುದಕ್ಕೆ ಸಾಕಷ್ಟು ಶಕ್ಯ ವಿರುವುದಿಲ್ಲ. ಕೆಲವು ಕಡೆ ಶ್ರೀಮಂತರು ಇರುತ್ತಾರೆ. ಅವರಿಗೆ, ಆದಷ್ಟು ಮಟ್ಟಿಗೆ ಇಂತಹ ವಿಪತ್ತನ್ನು ನೀಗುವಂತಹ ಶಕ್ತಿ ಇರುತ್ತದೆ; ಪೊಜೆನ್ನಿಯಲ್ ಪಷರ್ ಸಹ ಇರತ್ತದೆ. ಆದರೆ ಅಂಕೋಲ ತಾಲ್ಲೂಕಿನಲ್ಲಿ ಬಹಳ ಬಡತನವಿದೆ. ಅಲ್ಲಿಗೆ ಸಹಾಯ ಎಷ್ಟು ಕೊಟ್ಟರೂ ಅವರ ಕಷ್ಟ ಪೂರೈಸುವುದಿಲ್ಲ. ಅಂತಹ ಕಡೆ ಹಣ ಸಹಾಯವನ್ನು ಹೆಚ್ಚಿಸಬೇಕು. ಎಲ್ಲಿ ಜನತೆ ಸಾಕಷ್ಟು ಇಂತಹ ಕಷ್ಟನಷ್ಟಗಳನ್ನು ತಡೆದು ಕೊಳ್ಳುವ ಶಕ್ತಿಯನ್ನು ಹೊಂದಿರುತ್ತಾರೋ ಅಂತಹವರಿಗೆ ಸ್ವಲ್ಪ ಸಹಾಯವನ್ನು ಕೊಟ್ಟರೂ ಅವರು ಉಪಜೀವನವನ್ನು ಮಾಡಬಹುದು. ಅಂಕೋಲ ತಾಲ್ಲೂಕಿನಲ್ಲಿ ನೆಲಸಿರುವವರು ಮೂಲತಃ ಬಡವರು. ಅಲ್ಲಿ ಒಬ್ಬೊಬ್ಬನಿಗೆ 10 ಕುಂಟೆ, ½ ಎಕರೆ ಒಂದು ಎಕರೆ, 2 ಎಕರೆ—ಹೀಗೆ ಭೂಮಿ ಇರುತ್ತದೆ. ಅಂತಹ ಕಡೆಗಳಲ್ಲಿ ಈ ನಮೂನೆಯ ಸಹಾಯ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಯ ವಯಾವ ಭಾಗದಲ್ಲಿ ಬಡತನ ಹೆಚ್ಚಿದೆ. ಎಲ್ಲಿ ಜನರಿಗೆ ನಹನೆ ಮಾಡಿಕೊಳ್ಳುವ ಶಕ್ತಿ ಇಲ್ಲ, ಅಂಥಾದ್ದನ್ನು ನೋಡಿ ಸರ್ಕಾರದವರು ಸಹಾಯ ಮಾಡಬೇಕು. ಆ ರೀತಿ ಮಾಡದೆಯೇ ಎಲ್ಲಿ ಶಕ್ತವಂತರು ಇದ್ದಾರೆ, ಅಂತಹ ಕಡೆಯೇ ಸರ್ಕಾರದವರು ಹೆಚ್ಚಿನ ಸಾಕಾರ್ಯಗಳನ್ನು ಕೊಟ್ಟು ಹಣ ಸಹಾಯವನ್ನು ಸಹ ಯಥೇಚ್ಛವಾಗಿಕೊಡುತ್ತಿದ್ದಾರೆ. ಇದು ಬಹಳ ತಪ್ಪು. ನಾನು ಈ ಫ್ಲಡ್‌ರಿಲೀಫ್ ರೂಲ್ಸನ್ನು ಓದಿದ್ದೇನೆ 1960ನೆಯ ಇಸವಿಯಲ್ಲಿ ಮಾರ್ಚ್ ನೊಳಗೆ ಸರ್ಕಾರದವರು ಈ ಬಗ್ಗೆ ಮಾಡಿರುವ ರೂಲ್ಸ್‌ನಂತೆ ಹೋದರೆ ನಮ್ಮ ಬಡ ಜನಗಳಿಗೆ ಅದರಲ್ಲೂ ರೈತಾಪಿವರ್ಗದವರಿಗೆ ಯಾವ ಸಹಾಯವನ್ನೂ ಕೊಡುವುದಕ್ಕಾಗುವುದಿಲ್ಲ. ಎಲ್ಲಾ ತಾಲ್ಲೂಕ್‌ಗಳಿಗೂ 3 ಸಾವಿರ ರೂಪಾಯಿಗಳ ಸಹಾಯ ಧನ ಕೊಡಬೇಕೆಂದಿದೆ. ಅದರಲ್ಲಿ ತಹಸೀಲ್‌ದಾರರಿಗೆ ಅಧಿಕಾರ ಕೊಡುವುದು ಕೇವಲ 10 ರೂಪಾಯಿಗಳಿಂದ 40 ರೂಪಾಯಿಗಳವರೆಗೆ ಮಾತ್ರ. ಅದಕ್ಕೆ ಮೇಲೆ ಅವರು ಕೊಡಬೇಕಾದರೆ ಡೆಪ್ಯುಟಿ ಕಮಿಷನರ ಮಂಜೂರಾತಿಯನ್ನು ತಗೆದುಕೊಳ್ಳಬೇಕು. ತಾಲ್ಲೂಕಿಗೋ ಸ್ಕರ ಸರ್ಕಾರದವರು 3 ಸಾವಿರ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿದ್ದರೂ ತಾತ್ಕಾಲಿಕವಾಗಿ ಇಂತಹ ಸಂದರ್ಭಗಳಲ್ಲಿ ಕೊಡಬೇಕಾಗಿದ್ದರೆ ಅವನು ಕೇವಲ 35 ರೂಪಾಯಿಗಳನ್ನು ಮಾತ್ರ ಕೊಡಬಹುದು. ಈ ನಮೂನೆ ರೂಲ್ಸ್ ಈಗಲೂ ಇವೆ. ಇಂತಹ ಎಕ್ಸ್‌ಟ್ರಾರ್ಡಿನರಿ ಸರ್‌ಕಲಸ್ಟೆನ್ಸನ್‌ನಲ್ಲಿಯೂ ಈ ರೂಲ್ಸನ್ನು ಇಟ್ಟುಕೊಂಡರೆ ಹೇಗೆ ? ಅಂತಹ ರೂಲ್ಸನ್ನು ಕೂಡಲೇ ಸರ್ಕಾರದವರು ರಿಲ್ಯಾಕ್ಸ್ ಮಾಡಬೇಕು. ಕೆಲವು ಕಾಲದವರೆಗೆ ಇಂತಹ ಸನ್ನಿವೇಶಗಳು ಒದಗಿದಾಗ ಆ ರೂಲ್ಸ್‌ಗಳನ್ನೆಲ್ಲಾ ಸಸ್‌ಪೆಂಡ್ ಮಾಡಬೇಕು. ಎಕ್ಸ್‌ಟ್ರಾರ್ಡಿನರಿ ಮೆಜರ್ಸ್ ಮತ್ತು ರಿಲೀಫ್ ದೃಷ್ಟಿಯಿಂದ ನಾರ್ಮಲ್ ಅಥವಾ ಸಾಧಾರಣವಾದ ನಿಯಮದಂತೆ ನಡೆಯುವುದಕ್ಕಾಗುವುದಿಲ್ಲ. ಅಂತಹ ನಿಯಮಗಳನ್ನೆಲ್ಲಾ ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದವರು ಸಸ್ಪೆಂಡ್ ಮಾಡಬೇಕು. ಈ ದೃಷ್ಟಿಯಿಂದ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯಬೇಕು. ಜನರಿಗೆ ಸಕಾಲದಲ್ಲಿ ಸಹಾಯ, ಪರಿಹಾರ ಸಿಕ್ಕಿದರೆ ಒಳ್ಳೆಯದು. ಅದರಿಂದ ಹೆಚ್ಚಿನ ಮಟ್ಟಿಗೆ ಅನುಕೂಲ ಸಿಕ್ಕುತ್ತದೆ. ಕೊತ್ತು ಹೋದ ಮೇಲೆ ಅನುಕೂಲವನ್ನು ಕಲ್ಪಿಸಿ ಕೊಟ್ಟರೆ ಏನು ಪ್ರಯೋಜನ ? ಸರ್ಕಾರದವರು ಜನ ನರಳುವಾಗ ಸಹಾಯ ಕೊಟ್ಟರೆ ಅದರಿಂದ ಅನುಕೂಲವುಂಟಾಗುತ್ತದೆ. ಇಲ್ಲದೇ ಹೋದರೆ ಅನುಕೂಲಕ್ಕಿಂತ ಅನಾನುಕೂಲಗಳೇ ಹೆಚ್ಚಾಗುತ್ತವೆ. ಜನತೆಗೆ ಬೇಕಾದ ಸಹಾಯವನ್ನು ಕೊಟ್ಟು ಅವರ ಯೋಗಕ್ಷೇಮವನ್ನು ಸರ್ಕಾರ ನೋಡಬೇಕು. ನಮ್ಮ ಜಿಲ್ಲೆಗೆ 15 ಲಕ್ಷ ರೂಪಾಯಿಗಳನ್ನು ಇಂಟರೆಸ್ಟ್-ಫ್ರಿ ಲೋನಾಗಿ ಕೊಟ್ಟಿದ್ದಾರೆ. ಇತರ ನಾಲ್ಕು ಜಿಲ್ಲೆಗಳಿಗೂ ಸಹ ತಕಾವಿ ಸಾಲಗಳನ್ನು ಕೊಟ್ಟಿದ್ದಾರೆ. ಎಲ್ಲಾ ಜಿಲ್ಲೆಗಳಿಗಿಂತಲೂ ಹೆಚ್ಚಿಗೆ ನಮ್ಮ ಜಿಲ್ಲೆಯಲ್ಲಿ ಅನಾಹುತವಾಗಿದೆ. 30 ಲಕ್ಷಗಳಿಗೆ ಮೇಲ್ಪಟ್ಟು ಹಲಿಯಾಳ್ ತಾಲ್ಲೂಕಿನಲ್ಲಿ ನಷ್ಟವುಂಟಾಗಿದೆ. ಈ ದೃಷ್ಟಿಯಿಂದಲೇ ನಾಲ್ಕು ಜಿಲ್ಲೆಗಳಿಗೆ ಪರಿಹಾರ ಕೊಟ್ಟಿರುವುದು. ಧಾರವಾಡ ಜಿಲ್ಲೆಯಲ್ಲೂ ವಿಪರೀತ ಅನಾಹುತವುಂಟಾಗಿದೆ. ಡಿವಿಜನಲ್ ಕಮಿಷನರ್ ಅಲ್ಲಿ ಇಂತಹ ಕಾಲಕ್ಕೆ ಅಂತಹ ಪ್ರಸಂಗವನ್ನು ಸಾಗಿಸಿಕೊಂಡು ಹೋಗುವುದೇ ಬಹಳ ಕಠಿಣವಾಗಿದೆ. ಇಂತಹ ಸನ್ನಿವೇಶದಲ್ಲಿ ಸರ್ಕಾರದವರು ತಮ್ಮ ಕೈಯನ್ನು ಬಿಗಿಹಿಡಿಯದೆ ಉದಾರ ಮನಸ್ಸಿನಿಂದ ಹಣ ಸಹಾಯ ಕೊಟ್ಟರೆ ಜನತೆಗೆ ಅನುಕೂಲವಾಗಬಹುದು. ಆದುದರಿಂದ ಬೆಳಗಾಂ ಜಿಲ್ಲೆಗೆ 15 ಲಕ್ಷರೂಪಾಯಿಗಳನ್ನು ಒದಗಿಸಿರುವುದನ್ನು ಹೆಚ್ಚಿಸಬೇಕು. ಇನ್ನು ಅಧಿಕೃತ ವರದಿಯನ್ನು ನೋಡಿದರೆ ನಮ್ಮ ಅಂದಾಜಿನ ಪ್ರಕಾರ 2 ಕೋಟಿ ರೂಪಯಿಗಳಷ್ಟು ಅಲ್ಲಿ ನಷ್ಟವಾಗಿದೆ. ಆದರೆ ಅಷ್ಟು ಮೊಬಲಗನ್ನೂ ಈಗ ಒಂದೇ ಜಿಲ್ಲೆಗೆ ಕೊಡಲು ಖಂಡಿತವಾಗಿ ಸರ್ಕಾರಕ್ಕೆ ಶಕ್ಯವಿಲ್ಲವೆಂದು ಹೇಳಬಹುದು. ಅಂದ ಮೇಲೆ ರೀಜನಬಲ್ ಏನಿದೆ, ನಮಾಧಾನಕರವಾಗುವಷ್ಟು ಮತ್ತು ಜನತೆ ತೃಪ್ತಿಕರವಾಗುವಷ್ಟು ಅಂದರೆ ಮತ್ತೆ 15 ಲಕ್ಷ ರೂಪಾಯಿಗಳನ್ನಾದರೂ ನಮ್ಮ ಜಿಲ್ಲೆಗೆ ಕೊಡಬೇಕು. ಈ ಬಗ್ಗೆ ಡಿವಿಜನಲ್ ಕಮಿಷನರ್ ಅವರಿಗೆ ಕೂಡಲೇ ಅಧಿಕಾರ ಕೊಟ್ಟು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಜನತೆಗೆ ಸಕಾಲದಲ್ಲಿ ಮದದ್ ಸಿಕ್ಕಿದ ಹಾಗಾಗುತ್ತದೆ. ಆ ರೀತಿ ಮಾಡದೆ ಹೊತ್ತು ಮೀರಿದ ಮೇಲೆ ಈ ರೀತಿ ಸಹಾಯ ಕೊಟ್ಟರೂ ಪ್ರಯೋಜನವಿಲ್ಲ. ಆಗ 20 ಲಕ್ಷ ಅಲ್ಲ; 50 ಲಕ್ಷ ಕೊಟ್ಟರೂ ಉಪಯೋಗವಿಲ್ಲ. ನಿಮ್ಮ ವರದಿಯಲ್ಲಿ ಯೋಗ್ಯ ಮಾಹಿತಿ ಇದ್ದಿದ್ದರೆ ಈ ರೀತಿ ನಾನು ಮಾತನಾಡುತ್ತಿರಲಿಲ್ಲ. ಅದೇ ರೀತಿ ದಂಡೇಲಿಯಲ್ಲಿ ಕಾಳಿ ನದಿಗೆ ನೀರು ವಿಶೇಷವಾಗಿ ಬಂದು ಸುಮಾರು 200-300 ಮನೆಗಳು ನಾಶವಾಗಿ ಹೋಗಿವೆ. ಕೂಲಿ ಜನಗಳು ಹಾಳಾಗಿ ಹೋಗಿದ್ದಾರೆ. ರಸ್ತೆಗಳಲ್ಲಾ ನೀರು ಬಂದು ಅನೇಕ ರಸ್ತೆಗಳು ಕೆಟ್ಟು ಹೋಗಿವೆ. ಆ ರಸ್ತೆಗಳಲ್ಲಿ ಓಡಾಡುವುದೇ ಕಷ್ಟ. ಸಂಚಾರ ಸೌಕರ್ಯಕ್ಕೆ ಅಡ್ಡಿಯಾಗಿದೆ. ಬಡವರು ಜೀವನ ಮಾಡುವುದೇ ಕಷ್ಟ, ಕೆಲವು ಕಡೆ ಮಳೆಯಂತೂ ಸಕಾಲಕ್ಕೆ ಬಾರದೇ ಹೋಗಿದೆ. ಆಕಾಲದಲ್ಲಿ ವಿಪರೀತ ಮಳೆಯಾಗಿ ತುಂಬಾ ನಷ್ಟವುಂಟುಮಾಡಿದೆ. ಆದುದರಿಂದ ಜನತೆಗೆ ರಿಹ್ಯಾಬಿಲಿಟೆಷನ್ ಕೆಲಸದಲ್ಲಿ ಸರ್ಕಾರದವರು ಆದಷ್ಟು ಜಾಗ್ರತೆ ! ಸಹಕಾರಿಗಳಾಗುತ್ತಾರೆಂದು ನಾನು ಸಂಪೂರ್ಣವಾ ಆಶಿಸುತ್ತೇನೆ.

ಇದೇ ಪ್ರಕಾರ ಅರಣ್ಯ ಶಾಖೆಯವರು ಕೆಲವು ರಿಲೀಫ್‌ಗಳನ್ನು ಕೊಟ್ಟಿರುವುದನ್ನು ನೋಡಿದರೆ

ದೊಡ್ಡ ದೊಡ್ಡ ಕಂಟ್ರಾಕ್ಟುದಾರರಿಗೆ ಅದರಿಂದ ಅನುಕೂಲವಾಗಿದೆ 25 ಸಾವಿರಕ್ಕೆ ಮೇಲ್ಪಟ್ಟು ಲುಕ್ಸಾನು ಆಗಿರುವವರಿಗೆ ಮಾತ್ರ ಹೆಚ್ಚಿನ ರಿಲೀಫ್ ಸಿಕ್ಕಿದೆಯೇ ಹೊರತು ಐದು ಹತ್ತು ಸಾವಿರ ಲುಕ್ಸಾನು ಆಗಿರುವವರಿಗೆ ಏನೂ ಪರಿಹಾರ ಸಿಕ್ಕಲಿಲ್ಲ. 10-20 ಸಾವಿರ ರೂಪಾಯಿಗಳಷ್ಟು ಆಸ್ತಿ ಪಾಸ್ತಿ ಹೀಗೆ ಅವರ ಸರ್ವಸ್ವವೂ ಹೋದ ಮೇಲೆ ಅಂತಹವರಿಗೆ ಸಾಕಷ್ಟು ರಿಲೀಫ್ ಕೊಡದಿದ್ದರೆ ಏನು ಪ್ರಯೋಜನ? 10-15 ಸಾವಿರ ರೂಪಾಯಿಗಳಷ್ಟು ನಷ್ಟವಾಗಿರುವಂತಹವರಿಗೆ ಸಾಕಷ್ಟು ಸೌಲಭ್ಯವಿಲ್ಲದೇ ಹೋದರೆ ಬಹಳ ಅಸಮಾಧಾನವಾಗುತ್ತದೆ. ಯಾರ ಯಾರಿಗೆ ಲುಕ್ಸಾನು ಆಗಿದೆಯೋ ಅವರು ಚೆನ್ನಾಗಿ ಬಾಳಬೇಕು. ಆದರೆ ಅವರು ಶ್ರೀಮಂತರಾಗಬೇಕೆಂದಲ್ಲ. ಅವರ ಮುಂದಿನ ಜೀವನವನ್ನು ನಡೆಸುವುದಕ್ಕೆ ಸಹಾಯವಾಗಬೇಕು. ಈ ದೃಷ್ಟಿಯಿಂದ ಸಹಾಯವನ್ನು ಸರ್ಕಾರದವರು ಹೆಚ್ಚಿಗೆ ಕೊಡಬೇಕು.

Sri H. S. RUDRAPPA (Minister for Forests).—Discretion has been given to the Conservator of Forests, Belgaum Circle, to give relief in suitable cases.

Sri J. B. MALLARADHYA.— Will the Revenue Minister point out how it is that very important information relating to North Kanara is not given in his statement? According to Sri Kamath the extent of damage is Rs. 2 crores.

Sri KADIDAL MANJAPPA.—I have based my statement on the report I have received from the Deputy Commissioner of that district That is up to the 24th.

Sri C. J. MUCKANNAPPA.—He is a man coming from that place and knows better than your Deputy Commissioner.

Sri KADIDAL MANJAPPA.—I have already stated that it has not been possible to collect full information of inaccessibility to the places.

Sri G. VENKATAI GOWDA.—How is it that the Conservator of Forests is giving relief? How can he sit in judgment over the cases?

Sri H. S. RUDRAPPA.— This has happened in the month of May when there was heavy rainfall in Dandeli area in the last week of May. Sufficient measures have been taken to give them suitable relief wherever necessary. According to Sri Kamath relief has not been given to the small traders. Subsequently the order has been revised and the Conservator of Forests, Belgaum Circle, has been invested with power to give suitable and proper relief wherever necessary. This flood came in the month of May, but the present motion is about the recent floods.

Sri C. J. MUCKANNAPPA.—Is there any difference between the floods of May and the floods of July?

Sri G. VENKATAI GOWDA.—Yesterday we requested the Government to give us copies of the Government Order in this respect so that, wherever necessary, where Government was doing relief work we could co-operate with them in the implementation of the Government order.

ಶ್ರೀ ಆರ್. ಜಿ. ಕಾಮತ್.—ಮೇ-ಜೂನ್-ಜುಲೈ ತಿಂಗಳುಗಳಿಂದಲೂ ಪ್ರವಾಹ ಜಾಸ್ತಿಯಾಗಿ ಹೊಳೆತುಂಬಿ ನೆರೆಹೊರೆಯ ಪ್ರಾಂತಗಳಲ್ಲಿ ಹರಿದು ಬೆಳೆಗಳೆಲ್ಲಾ ನಾಶವಾಗಿಹೋಗಿದೆ. ಈಗ ಆರೀತಿ ಲುಕ್ಸಾನು ಸಹ ಖಾಯಂ ಆಗಿದೆ. ಒಂದೊಂದು ವೇಳೆಯಲ್ಲಿ ಅಪ್ಪಾಗಿ ಲುಕ್ಸಾನು ಆಗುವುದೂ ಇಲ್ಲ. ಈ ದೃಷ್ಟಿಯಿಂದ ನೀವು ರಿಲೀಫ್‌ರೂಲ್ಸನ್ನು ಮಾಡಿರುವ ಪ್ರಕಾರ ಪ್ರವಾಹದಿಂದ ಕೊಚ್ಚಿಹೋದ ಮತ್ತು ಭೂಮಿಯಲ್ಲಿ ಬೆಳೆದಿರತಕ್ಕ ಫಸಲನ್ನು ಕಳೆದು ಕೊಂಡಂತಹ ಭೂಮಾಲೀಕರಿಗೆ ಇಂಟರೆಸ್ಟ್-ಫ್ರೀ ಲೋಕ್ ನನ್ನು ಹತ್ತು ವರ್ಷಗಳ ಮ್ಯಾಗ್ಜಿಮಂ ಪೀರಿಯಡ್ಡಿನಲ್ಲಿ ತೀರಿಸುವ ಹಾಗೆ ನೂಚನೆ ಕೊಟ್ಟು ಸರ್ಕಾರದವರು ಅವರಿಗೆ ಸಹಾಯಮಾಡಬೇಕು. ತಮ್ಮ ಕಾಯಿದೆಗಳಲ್ಲಿ ಬಡ ರೈತರಿಗೆ ಕಳವಳವನ್ನುಂಟುಮಾಡತಕ್ಕ ಕ್ಲಾಜುಗಳು ಅನೇಕವಿವೆ. ಅವನ್ನೆಲ್ಲಾತೆಗೆದು ಹಾಕಿ ಅವುಗಳಲ್ಲಿ ಯಾವೊಂದೂ ಕಳವಳದ ಕ್ಲಾಜು ಇಲ್ಲದ ಹಾಗೆ ಮಾಡಿ ರೈತರಿಗೆ ಹೆಚ್ಚಿನ ಸಹಾಯ ಸಿಕ್ಕುವಂತೆ ಮಾಡಬೇಕು. ಏಕೆಂದರೆ ಕೆರೆಯ ಕೆಳಿಗಿನ ಭೂಮಿ ಅನೇಕರದು ಹಾಳಾಗಿ ಹೋಗಿದೆ. ಅನೇಕ ಕೆರೆಗಳು ಒಡೆದು ಹೋಗಿರುವುದರಿಂದ ಅದು ಸಣ್ಣ ಸಣ್ಣ ಹಳ್ಳವಾಗಿದೆ. ಆದುದರಿಂದ ಕೆರೆಯ ಕೆಳಗಿನ ರೈತರು ಏನು ಇದ್ದಾರೆ ಅಂತಹವರಿಗೆ ಹೆಚ್ಚಿಗೆ ಮದದ್ ಸರಕಾರದವರು ಕೊಡಬೇಕು. ಈ ವರ್ಷವಂತೂ ಬೆಳೆ ಯಾವುದೂ ಬರುವುದಿಲ್ಲ. ಮುಂದಿನ ವರ್ಷವಾದರೂ ಹೂತು ಹೋಗಿರುವ ಮತ್ತು ಕೊಚ್ಚಿಹೋಗಿರುವ ಜಮೀನುಗಳೆಲ್ಲ ದುರಸ್ತಾಗಬೇಕು. ಆದರೆ ಮುಂದಿನ ವರ್ಷ ಬೆಳೆ ಇಡಬಹುದು—ಇಲ್ಲದಿದ್ದರೆ ಮುಂದಿನ ವರ್ಷದ ಬೆಳೆಯೂ ಸಹ ಇಲ್ಲ. ಮುಂದಿನ ವರ್ಷ ಬೇಸಾಯದ ಕಾಲಕ್ಕೆ ಸರಿಯಾಗಿ ಈ ಭೂಮಿಗಳನ್ನೆಲ್ಲಾ ರಿಪೇರಿ ಮಾಡಲು ರೈತರಲ್ಲಿ ತ್ರಾಣವಿಲ್ಲ. ಇಂಥ ಕೆಲವು ವಿಚಿತ್ರದ ಕೇಸುಗಳಿವೆ. ಇವುಗಳಿಗೆಲ್ಲ ಒಂದು ಸ್ಪೆಷಲ್ ಟ್ರೀಟ್‌ಮೆಂಟು ಅತ್ಯಗತ್ಯ. ಈಪರಿಗೂ ನಮ್ಮ ಜಿಲ್ಲೆಗೆ ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟಿನ ಬಸ್ಸಿಗೆ ಕೊಡತಕ್ಕ ಸಾಲಗಳಿಗೆ ಗ್ಯಾರಂಟಿನೂ ಬಂದಿಲ್ಲ. ಬಂದಾಗ್ಯೂ ಈಗೇನು ಸರ್ಕಾರ ಕೊಡತಕ್ಕ ಸಾಲಕ್ಕೆ ಆ ರೈತರು ಜಾಮೀನನ್ನು ಕೊಡಬೇಕೆಂದು ಒಂದು ನಿರ್ಬಂಧಹಾಕಲಾಗಿದೆಯೋ ಅದರಿಂದ ರೈತರಿಗೆ ಈ ಸಾಲ ಸಹ ಪಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಾಹುಕಾರರು ಎಂದಿಗೂ ರೈತರಿಗೆ ಜಾಮೀನು ಆಗುವುದಿಲ್ಲ. ರೈತರು ಸೊಸೈಟಿಗಳಲ್ಲಿ ಮಾಡಿದ್ದ ಸಾಲವನ್ನೇ ಇನ್ನೂ ತೀರಿಸಲು ಸಾಧ್ಯವಾಗಿಲ್ಲ. ಆದುದರಿಂದ ಸರ್ಕಾರದವರು ರೈತನಿಗೆ ಸಹಾಯ ನೀಡಬೇಕೆಂಬ

(ಶ್ರೀ ಆರ್. ಜಿ. ಕಾಮತ್)

ಸಹಾನುಭೂತಿ ಇದ್ದದ್ದೇ ಆದರೆ ಅವರು ಈ ಸಾಲ ಗಳನ್ನೆಲ್ಲಾ ಕೇವಲ ಆ ರೈತರಿಗಿರತಕ್ಕ ಜಮೀನಿನ ಆಧಾರದ ಮೇಲೆ ಕೊಡಬೇಕು. ಇಲ್ಲವೇ ಆ ರೈತನ ಪರ್ಸನಲ್ ಸೆಕ್ಯೂರಿಟಿಯ ಮೇಲೆ ಸಾಲ ಕೊಡಬೇಕು. ಹೀಗೆ ಮಾಡಿದರೇನೇ ಆ ರೈತರಿಗೆ ಸ್ವಲ್ಪ ಅನುಕೂಲವಾಗುತ್ತದೆ. ಆದುದರಿಂದ ಈಗ ಸರ್ಕಾರದವರು ಇಟ್ಟಿರತಕ್ಕ ಸೆಕ್ಯುರಿಟಿಕ್ಲಾಜನ್ನು ರದ್ದು ಮಾಡದಿದ್ದರೆ ರೈತರಿಗೆ ಏನೂ ಅನುಕೂಲವಾಗುವುದಿಲ್ಲ. ಹೀಗೆ ಮಾಡದೆ ಸರ್ಕಾರ ಎಷ್ಟೇ ಹುಕುಂ ಮಾಡಿದರೂ ಅವುಗಳಿಂದೇನು ರೈತರಿಗೆ ಪ್ರಯೋಜನವಾಗುವುದಿಲ್ಲ. ಆದುದರಿಂದ ಸರ್ಕಾರದವರು ಈ ಸೆಕ್ಯುರಿಟಿಕ್ಲಾಜನ್ನು ತೆಗೆದು ಹಾಕಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Before I call upon other members to speak, I would like to impose a time-limit because today would be the last day and we should conclude. I would like to know what should be the time-limit.

Sri C. J. MUCKANNAPPA.—We have lost one hour between 2 and 3 P.M. If the Chair is agreeable, it may decide to extend today's sitting.

Mr. SPEAKER.—Probably the Hon'ble Member is not aware that we are sitting till 7 o'clock today.

Sri C. J. MUCKANNAPPA.—If that is so, I would suggest a limit of 20 minutes for each speaker.

Sri KADIDAL MANJAPPA.—Ten minutes would be sufficient.

Sri J. B. MALLARADHYA.—As a compromise we may agree to the time limit of 15 minutes for each speaker.

Mr. SPEAKER.—All right. I agree. Before I call upon the next speaker Sri Mallaradhya may move his amendment to the amendment moved by Sri Ramakrishna Hegde.

Sri J. B. MALLARADHYA.—I beg to move an amendment to the amendment moved by Sri Ramakrishna Hegde:

"That after the words 'recent floods in the State' in line 4, the following words shall be added:

(i) "offers its sincere condolence to the families of persons who died by reason thereof;

(ii) "for the figure and words '2 crores of rupees' the words and figures '10 crores of rupees' shall be substituted."

Mr. SPEAKER.—Amendment moved:

"That after the words 'recent floods in the State' in line 4, the following words shall be added:

(i) "offers its sincere condolence to the families of persons who died by reason thereof;

(ii) "for the figure and words '2 crores of rupees' the words and figures '10 crores of rupees' shall be substituted."

Sri B. G. KHOT.—I had sent in an amendment.

Mr. SPEAKER.—The amendment was received too late and hence it could not be admitted.

* Sri RAMAKRISHNA HEGDE (Sirsi).—Sir, I have no intention of making a lengthy speech particularly in view of the time limit applied by the Speaker. I come from a district which had suffered the misfortune of facing heavy floods twice in the course of 2 or 3 months. During May, there were unseasonal rains of heavy intensity and as a result the rivers were in spate. Timber worth lakhs of rupees was washed away and large areas of paddy fields which were just sown, were washed out. Again, now in the month of July the district has had to face a greater calamity, in common with some other districts of this State.

I am told that in 1924 as a result of heavy rains the Mysore State was afflicted with floods putting many rivers into spate. I do not know about it because I was not born at that time. According to the reports from some of the areas now, it is clear that the calamity is of a stupendous magnitude.

We are thankful to the Hon. Revenue Minister for placing on the Table of the House a detailed statement with regard to the damage caused and also for detailing the measures that are being taken to relieve distress. In the very nature of things, the report cannot be accurate but all of us feel that the account he has given with regard to the damage and the loss incurred, is a gross under-estimate. For instance, there are certain areas, particularly in

Malnad districts, where nobody knows till today of the nature and extent of damange caused. Many of the villages in these areas are inaccessible even during days of normal rainfall, for about 3 to 4 months in the year and now no one can think of entering these villages during the current seasons when the rains are so heavy. In North Kanara, Sirsi, Siddapur, Yellapur and Mundgod are so badly hit that there are many more Andamans, completely cut off from the outside world for four months during monsoon. Similarly in Coorg, Chickmagalur and Shimoga districts and many parts of South Kanara district, there are many villages about which we do not know much and we are unable to assess the nature and extent of damage caused by recent rains.

Under these circumstances, naturally the report is based on developments. The correct picture of the loss and damage caused by the recent floods is not before us. I do not want to go into details with regard to this, nor with regard to details about the relief measures that are being taken by the Government. I would like to take the opportunity to make one or two suggestions. In the course of his speech, my friend Sri Mallaradhya yesterday made two important suggestions. One is with regard to the constitution of a flood relief committee and the other in regard to the constitution of flood control board. That would be a sort of inter-State Board. With regard to the first, I would like to say that it may not be expedient at this time to constitute a flood relief committee. Perhaps by constituting this committee, relief work may be delayed. On the other hand, I would like to suggest that powers may be decentralised and the Government officers on the spot may be invested with adequate powers not only to take decisions on the spot but also to give the the people adequate relief without much delay. It has come to our notice that some of our Ministers, perhaps most of our Ministers have undertaken tours in these affected areas. But I am afraid that nothing substantial could be achieved by these hurricane and hurried tours. Perhaps sometimes it becomes inconvenient for the local workers when the Ministers visit the same place too often. My friend Sri Puttaswami along with his colleagues undertook on behalf of the Mysore Pradesh Congress Committee, a tour of the affected areas recently. He had a story to tell. It was in T.-Narsipur Taluk. He and his friends went to the village which was badly affected by rains and floods. The people were waiting for the Minister with garlands, with all other kind of things with which we usually receive Ministers. But unfortunately that particular Minister could not visit that village. They had been waiting all the day and in addition to the misery and hardships they had to face on account of the floods, they had this disappointment. Why I am mentioning here is, very frequent visits of Ministers, perhaps dislocate the normal work. Instead of these hurricane tours, I would like to suggest that a Minister should be put in charge of an affected district where he should stay, camp and tour the affected areas for a week, ten days or even 15 days and personally supervise the relief work. For example, there are some Ministers coming from these affected areas ; they may be asked by the Chief Minister.....

Sri J. B. MALLARADHYA.—If the Hon'ble Member were to yield for a minute, we heard recently that Mr. Thanu Pillay of Kerala, the Chief Minister of Kerala has made an arrangement by which each Minister will go to each of the affected districts and he has been empowered to take on the spot decisions and give effect to these orders and see that the orders are enforced. He is a P.S.P. Chief Minister. I am only saying that what i required is quick decisions and immediate relief. It may be a P. S. P. Minister or a Congress Minister; it does not matter; but when a nice thing is done, why not follow it? I am only bringing it to the notice of the House.

Sri RAMAKRISHNA HEGDE.—I am glad that Sri Mallaradhya quoted that. The Chief Minister who belongs to the P. S. P. is only there because of the Deputy Chief Minister who belongs to the Congress Party.

Sri J. B. MALLARADHYA.—All right. If the Congress will support the P. S. P. they will certainly rule well.

Sri RAMAKRISHNA HEGDE.—I can quote better instances. For example, Madras Government is there; Maharashtra Government is there where the Chief Ministers themselves toured the affected areas and took action in giving immediate relief to the affected areas. Sri Kamaraj Nadar whose 59th birthday was to be celebrated on a large scale and for which Sri Chavan flew all the way from Bombay was not present on the occasion because he was touring in the affected areas. There are better examples (*Interruption*). I was suggesting that instead of constituting a flood relief committee at the State level, at the district level and at the taluk level, it would be much better in the interests of expeditious relief to put a Minister in charge of an affected district and he must be invested with powers adequate enough to take decisions on the spot and to grant relief. What the victims of the flood want is immediate relief, whether it is adequate or inadequate. Perhaps we connot afford to give them adequate relief in the strict sense, but they are in need of immediate relief. If you fail to give that relief, I am afraid you will be failing in your duty.

The other suggestion made by Sri Mallaradhya is with regard to the constitution of a Flood Control Board. I support it. In 1959 there was a similar calamity, may be of lesser magnitute. Many districts of our State were affected by 959 floods also. That has become a recurring phenomena in our State. We used to hear that in Northern India, particularly in Bihar, where the rivers were temperamental, changing their courses very often, people were subjected to the havocs of floods. But we had not had such experience in the past except one a long while ago. Therefore, it would be in the interest of the State to approach the other neighbouring Governments and take steps for the formation of a Flood Control Board by which we can think of the possibilities of controlling floods and prevent their recurrence.

Sir, as I have already stated, the actual loss to life and property cannot be correctly estimated at this stage. When I sent this amendment suggesting to the State Government to urge on the Central Government to give financial aidto the State Government at least to the extent of two crores, it was said that it was too small an amount. By that what I meant was that the Government of Mysore was in urgent need of this help and that was not the maximum limit. If the Central Government immediately comes to the help of this State with two crores of rupees, that would be a great relief. That does not mean that we should not ask for more or they should not give us more.

Sir, Sri Mallaradhya has sent an amendment to my amendment and I have no hesitation in accepting it.

With regard to permanent relief measures, I would like to say a few words. In 1959, as the General Secretary of the Pradesh Congress Committee, I undertook a tour of the affected areas, particularly, North Canara, Shimoga, Coorg and Chickmagalur districts and submitted a detailed report to the Government suggesting certain measures to be undertaken by them to afford permanent relief. I do not know what has happened to that report. I do not mean to say that those suggestions were fool-proof and that they were the only suggestions that could be made. I wish the Government had examined these suggestions and taken certain steps to implement the same if they were worthy of it.

Sir, the Leader of the Opposition yesterday in the course of his speech opposed the idea of adjournment of this House for a fortnight to enable the members to go back to their places, particularly, members who come from the affected areas and work towards the relief of the sufferers. I do not know whether he actually meant it. In fact, our work lies in those affected areas more than here. They are in urgent need of all sorts of help apart from financial help. It is our duty to attend to those requirements immediately. Therefore, I welcome the idea of adjourning the House for a short while to enable the

Members and the Ministers to go to these affected areas and attend to the relief work.

Lastly, I would like to make one more suggestion. Huge damage has been caused on account of fields being inundated by heavy rains and du to collapse of houses. There is a third type of damage and that is the damage caused to the plantation like coffee and arecanut. Sir, I have received reports from North Canara district that large areas of arecanut gardens have been very badly damaged due to heavy rain as well as cyclone. Hundreds and thousands of trees have fallen and it is very difficult to raise that crop again. Perhaps, members of this House are aware that it takes 10 to 12 years to rear up arecanut garden by the time they yield fruit. I would request the Government to find out some way by which these people could also be helped. Thank you, Sir.

ಶ್ರೀ ಎ. ಎಂ. ಬಸವೇಗೌಡ (ಚಿಕ್ಕಮಗಳೂರು).— ಅಧ್ಯಕ್ಷರೇ, ನಮ್ಮ ಅನೇಕ ಮಾನ್ಯ ಸ್ನೇಹಿತರು ಪ್ರವಾಹದ ಹಾವಳಿಯಿಂದ ಏನೇನು ಅನಾಹುತಗಳಾಗಿವೆ ಎಂದು ವಿಶದವಾಗಿ ವಿವರಿಸಿದ್ದಾರೆ. ನನಗೆ ಕೊಟ್ಟ ಅಲ್ಪ ಕಾಲದಲ್ಲಿ ನಮ್ಮ ಸಂಸ್ಥಾನದಲ್ಲಿ ಏನೇನು ಅನಾಹುತಗಳಾಗಿವೆ ಎಂದು ಹೇಳಲು ಆಗದೇಯಿದ್ದರೂ ನಮ್ಮ ಜಿಲ್ಲೆಯಲ್ಲಿ ಅದರಲ್ಲಿಯೂ ಮೂಡಿಗೆರೆ ತಾಲ್ಲೂಕಿನಲ್ಲಿ ಏನೇನು ಅನಾಹುತಗಳಾಗಿವೆ ಎಂಬುದನ್ನೂ, ಸರ್ಕಾರದವರು ಏನೇನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನೂ ಸ್ವಲ್ಪದರಲ್ಲಿ ಹೇಳುತ್ತೇನೆ. ಪ್ರಾಯಶಃ ನಾನು ತಿಳಿದುಕೊಂಡಿರುವ ಹಾಗೆ ಈಗಿನ ಪ್ರವಾಹದ ಹಾವಳಿಯಿಂದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬಹಳವಾಗಿ ನಷ್ಟ ಸಂಭವಿಸಿದೆ ಎಂದರೆ ಅತಿಶಯೋಕ್ತಿಯಾಗಲಾರದು. ತಾವುಗಳೆಲ್ಲರೂ ಪತ್ರಿಕೆಗಳಲ್ಲಿ ಓದಿರುತ್ತೀರಿ. ಮಾನ್ಯ ಮಂತ್ರಿಗಳೂ ಕೂಡ ಅಲ್ಲಿಗೆ ಬಂದು, ಖುದ್ದಾಗಿ ನೋಡಿಕೊಂಡು ಬಂದಿರುವುದರಿಂದ ಅವರಿಗೂ ಮನವರಿಕೆಯಾಗಿದೆ. ಹೀಗೆ ಹೇಳುತ್ತ ಪ್ರವಾಹದ ಹಾವಳಿಯಿಂದ ಏನೇನು ಅನಾಹುತಗಳಾಗಿವೆ ಎಂದು ಸ್ಥೂಲವಾಗಿ ವಿಂಗಡಿಸಿ ಹೇಳುತ್ತೇನೆ. ಮೊದಲನೆಯದಾಗಿ ಬತ್ತದ ಗದ್ದೆಗಳಿಗೆ ಏನೇನು ಅನಾಹುತವಾಗಿದೆ, ರಸ್ತೆ ಸಂಚಾರಕ್ಕೆ ಏನೇನು ತೊಂದರೆಯಾಗಿದೆ, ಸೇತುವೆಗಳಿಗೆ ಏನು ಅನಾಹುತವಾಗಿದೆ, ಕಾಫಿ ತೋಟಗಳಿಗೆ ಏನು ಅನಾಹುತವಾಗಿವೆ ಎಂದು ಹೇಳಬೇಕಾಗುತ್ತದೆ.

ಮೂಡಿಗೆರೆ ತಾಲ್ಲೂಕಿನಲ್ಲಿ ಎರಡು ಹೋಬಳಿಗಳಲ್ಲಿ ಎಂದರೆ ಬಾಳೂರು ಮತ್ತು ಬಣಕಲ್ ಹೋಬಳಿಗಳಲ್ಲಿ ನುಮಾರು ಆರು ಸಾವಿರ ಎಕರೆ ಜಮೀನು ಹಾಳಾಗಿರುವುದಲ್ಲದೆ, ಆ ಜಮೀನು ಇನ್ನೂ ಮೂರು ವರ್ಷ ಸಾಗುವಳಿ ಮಾಡುವ ಪರಿಸ್ಥಿತಿಯಲ್ಲಿ ಸಹ ಇಲ್ಲ. ಒಂದೊಂದು ಜಮೀನಿನಲ್ಲಿಯೂ ಆರೆಂಟು ಅಡಿ ಮಣ್ಣು ಬೆಟ್ಟದಿಂದ ಕೊಚ್ಚಿಬಂದು ತುಂಬಿದೆ. ಅದನ್ನು ತೆಗೆಸುವುದಕ್ಕೆ ಎಕರೆಗೆ ಎರಡು ಸಾವಿರ ರೂಪಾಯಿಗಳವರೆಗೂ ಖರ್ಚಾಗುತ್ತದೆ. ಇಷ್ಟು ಹಣ ಖರ್ಚಾದರೂ ಈ ವರ್ಷ ಜಮೀನನ್ನು ಸಾಗುವಳಿ ಮಾಡುವುದಕ್ಕಾಗುವುದಿಲ್ಲ. ಜಮೀನು ನಷ್ಟವಾಗಿರುವುದಲ್ಲದೆ ಅವರಿಗೆ ತಿನ್ನುವುದಕ್ಕೆ ಏನೂ ಇಲ್ಲವಾಗಿದೆ. ಆದುದರಿಂದ ರೈತರಿಗೆ ತಕಾವಿ ಸಾಲವನ್ನು ಬಡ್ಡಿಯಿಲ್ಲದೆ ಕೊಡಬೇಕು. ಮತ್ತು ಇದರ ಜೊತೆಗೆ ಯಾರ ಯಾರ ಜಮೀನು ನಷ್ಟವಾಗಿದೆ ಎಂದು ಒಂದು ಪಟ್ಟಿಮಾಡಿ, ಅವರಿಗೆ ಈ ವರ್ಷದಲ್ಲಿ ಗೂಟಕ್ಕೋಸ್ಕರ ಬತ್ತವನ್ನು ಗ್ರಾಂಟ್‌ಆಗಿ ಕೊಡಿ ಅಥವಾ ಸಾಲವಾಗಿ ಕೊಟ್ಟರೂ ಎರಡುಮೂರು ಕಂತುಗಳಲ್ಲಿ ತೀರಿಸಬಹುದು. ಇವರಿಗೆಲ್ಲ ಬತ್ತವನ್ನು ಸರ್ಕಾರದ ಆಹಾರ ಮಳಿಗೆಗಳಿಂದ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅನೇಕ ಜನ ಟೆನೆಂಟ್ಸ್‌ಆಗಿ ಐದಾರು ಎಕರೆ ಜಮೀನನ್ನು ಗುತ್ತಿಗೆಗೆ ಮಾಡುತ್ತಿದ್ದಾರೆ. 10-15 ಎಕರೆ ಪ್ಲಾಟ್ 30-40 ಎಕರೆ ಪ್ಲಾಟ್‌ಗಳಲ್ಲಿ ಬೆಟ್ಟದ ಮಣ್ಣು ಬಂದು ಬಿದ್ದಿದೆ. ಇದಲ್ಲದೆ ಹೇಮಾವತಿ ನದಿ ಹರಿಯುವ ಜಾಗವನ್ನು ಬಿಟ್ಟು ಗದ್ದೆಗಳ ಮೇಲೆ ಹರಿಯುತ್ತ ಆದರ ಪಾತ್ರ (Course) ಬದಲಾವಣೆಯಾಗಿರುವುದರಿಂದ ಎರಡು ಮೂರು ವರ್ಷ ಆ ಗದ್ದೆಗಳು ಏನೂ ಮಾಡುವುದಕ್ಕಾಗದ ಸ್ಥಿತಿಯಲ್ಲಿವೆ, ಆ ಜಮೀನುಗಳಲ್ಲಿ ಏನೂ ಬೆಳೆ ಬೆಳೆಯುವುದಕ್ಕಾಗುವುದಿಲ್ಲ. ಆದುದರಿಂದ ಬತ್ತದ ಗದ್ದೆಯವರಿಗೆ ತಕಾವಿ ಲೋನನ್ನು ಫ್ರೀ ಆಫ್ ಇಂಟರೆಸ್ಟ್ ಕೊಡಬೇಕು. ಆಹಾರ ಧಾನ್ಯವನ್ನು ಕೊಡಬೇಕು. ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಕೊಡಬೇಕು. ಲ್ಯಾಂಡ್ ರೆವಿನ್ಯು ಮೂರು ವರ್ಷ ಕಲೆಕ್ಟ್ ಮಾಡಬೇಕಾಗಿಲ್ಲವೆಂದು ಆರ್ಡರ್ ಹೊರಡಿಸಿದ್ದೀರಿ. ಎಲ್ಲಿಯವರೆಗೆ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿರುವುದಿಲ್ಲವೋ ಆ ಲ್ಲಿ ಯ ವ ರೆ ಗೂ ಲ್ಯಾಂಡ್ ರೆವಿನ್ಯು ಮಾಫಿ ಮಾಡಬೇಕು. ಏಕೆಂದರೆ ಕೆಲವೊಂದು ಜಮೀನುಗಳು ಮುಂದಿನ ಐದು ವರ್ಷಗಳಲ್ಲಿಯೂ ಕಲ್ಟಿವೇಶನ್ನಿಗೆ ಯೋಗ್ಯವಾಗದೆ ಇರವ ಸಂಭವವಿದೆ. ಆದುದರಿಂದ ಅಸೆಸ್‌ಮೆಂಟ್ ರೆಮಿಟ್ ಮಾಡುವ ಪೀರಿಯಡ್ಡನ್ನು ಇಪ್ಪೇ ವರ್ಷಗಳೆಂದು ನಿಗದಿ ಮಾಡಬಾರದು.

ಅನೇಕ ಝರಿಗಳು, ಹಳ್ಳಗಳು ಜಮೀನಿನ ಮೇಲೆ ಹರಿಯುತ್ತಾ ಇವೆ. ಅವುಗಳು ಹರಿಯುವುದನ್ನು ಕೂಡಲೆ ತಪ್ಪಿಸುವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಅನೇಕ ಕಾಫೀ ತೋಟಗಳೂ ಹಾಳಾಗಿಹೋಗಿವೆ: ಕಳಸ ಹೋಬಳಿಯಲ್ಲಿ 35 ಎಕರೆ ಇದ್ದ ಒಂದು ತೋಟದಲ್ಲಿ, 30 ಎಕರೆ ಹಾಳಾಗಿಹೋಗಿ ಕೇವಲ ಐದು ಎಕರೆ ಉಳಿದಿದೆ. ಆದೂ ಸಾಗುಮಾಡುವ ಸ್ಥಿತಿಯಲ್ಲಲ್ಲ. ಹೇಮಾವತಿ ತೋಟದಲ್ಲದ್ದ ಬಂಗಲೆ ಪೂರ್ತಿಯಾಗಿ ನಾಶವಾಗಿ, ಅವರ ತೋಟಕ್ಕೆ ಬಹಳ ಅನಾಹುತವಾಗಿಹೋಗಿದೆ. M.S.P.A. ಅಸೋಸಿಯೇಷನ್ ಪ್ರೆಸಿಡೆಂಟ್ ಶ್ರೀ ಎ. ಕೆ. ಲಕ್ಷ್ಮಣಗೌಡರದು ಅಲ್ಲಿ ಇಲ್ಲಿ 5—10—15 ಎಕರೆ ಹೋಗಿದೆ; ಒಟ್ಟು 35 ಎಕರೆ ನಾಶವಾಗಿದೆ. ನಮ್ಮ ರೆವಿನ್ಯೂ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟಿನಲ್ಲಿ "8373 acres of agricultural land including coffee plantations have been damaged in Chickmagalur District" ಎಂದು ಹೇಳಿದ್ದಾರೆ. 8373 ಎಕರೆ ಎಂದು ಹೇಳಿದ್ದಾರೆಯೇ ಹೊರತು, ಅದರಲ್ಲಿ ಬತ್ತದ ಗದ್ದೆ ಎಷ್ಟು, ಕಾಫೀ ಎಸ್ಟೇಟ್, ಕಾರ್ಡಮಮ್ ಮತ್ತು ಅಡಿಕೆ ತೋಟವೆಷ್ಟು ಎಂದು ವಿಶದವಾಗಿ ಹೇಳಿಲ್ಲ. ಈ ವಿವರವನ್ನು ಹೇಳಿದ್ದರೆ ಚೆನ್ನಾಗಿತ್ತು. ಪ್ರಾಯಶಃ ಸರ್ಕಾರಕ್ಕೂ ವಿವರ

(ಶ್ರೀ ಎ. ಎಂ. ಬಸವೇಗೌಡ)

ಗಳು ಸಿಕ್ಕಿಲ್ಲ. ಪ್ರವಾಹದ ಸಮಯದಲ್ಲಿ ಅನೇಕ ಜಾಗಗಳಿಗೆ ಹೋಗುವುದಕ್ಕಾಗಿಲ್ಲ. ಕಳಸ ಹೋಬಳಿ ಗಂತೂ ಇವೊತ್ತಿಗೂ ಹೋಗುವುದಕ್ಕಾಗುವುದಿಲ್ಲ. ಪಿ.ಡಬ್ಲ್ಯು.ಡಿ.ಯವರು ಕಗ್ಗನಹಳ್ಳಿ ಬ್ರಿಡ್ಜಿಗೆ ಕಾಂ ಕ್ರೀಟ್ ಬೆಡ್ ಹಾಕಿ ಮೊದಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರೆ, ಅದನ್ನು ತ್ವರಿತವಾಗಿ ರಿಪೇರಿ ಮಾಡಿದ್ದರೆ, 5-6 ಸಾವಿರ ಜನಕ್ಕೆ ಅನನುಕೂಲವಾ ಗುತ್ತಿರಲಿಲ್ಲ. ಪಿ. ಡಬ್ಲ್ಯು. ಡಿ. ಇಲಾಖೆಯವರು ಔದಾಸೀನ್ಯ ತೋರಿಸದಿದ್ದರೆ, ಜನಗಳ ಕಷ್ಟವನ್ನು ಸ್ವಲ್ಪಮಟ್ಟಿಗಾದರೂ ಪರಿಹರಿಸಬಹುದಾಗಿತ್ತು.

ಗವರ್ನ್‌ಮೆಂಟಿನವರು ಇನ್ನೊಂದು ಮುಖ್ಯ ಕಾರ್ಯಕ್ರಮವನ್ನು ಕೂಡಲೆ ತೆಗೆದುಕೊಳ್ಳಬೇಕಾಗಿದೆ. ನಮ್ಮ ಕಡೆ ಹಳ್ಳಿಗಳಲ್ಲಿ ರೂಪಾಯಿಗೆ ಒಂದು ಸೇರು ಅಕ್ಕಿ, ಆರು ಆಣೆಗೆ ಒಂದು ಬೆಂಕಿ ಪೊಟ್ಟಣ ಮಾರುತ್ತಿದ್ದಾರೆ. ಜನಗಳ ಕಷ್ಟ ಹೇಳ ತೀರದು. ಜನಗಳು ಒಂದು ಕಡೆ ಪ್ರವಾಹದಿಂದ ಬಳ ಲುತ್ತಿದ್ದರೆ, ಇನ್ನೊಂದು ಕಡೆ ವ್ಯಾಪಾರಸ್ಥರು ಅವ ರಿಗೆ ಕೆರುಕುಳ ಕೊಡುತ್ತಿದ್ದಾರೆ. ಪೋಲೀಸು ಡಿಪಾರ್ಟ್‌ಮೆಂಟಿನ ಮೂಲಕ ನುಲಿಗೆ ಮಾಡುತ್ತಿರುವ ಈ ಮರ್ಚೆಂಟ್ಸ್ ಮೇಲೆ, ನಮಾಜದ್ರೋಹಿಗಳ ಮೇಲೆ ಸರ್ಕಾರದವರು ಉಗ್ರ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಕಾಫೀ ಎಸ್ಟೇಟುಗಳು ಡ್ಯಾಮೇಜ್ ಆದವರಿಗೂ ತಕಾವಿ ಲೋನ್ ಕೊಡಬೇಕು. ಅನೇಕ ಸಣ್ಣ ಪ್ಲಾಂಟರುಗಳು ಬಹಳ ನಷ್ಟಕ್ಕೆ ಒಳಗಾಗಿದ್ದಾರೆ. ಒಬ್ಬೊಬ್ಬರಿಗೂ ಎಷ್ಟು ನಷ್ಟವಾಗಿದೆಯೆಂಬುದನ್ನು ಬಾಳೆಹೊನ್ನೂರು ರಿಸರ್ಚ್ ಸ್ಟೇಷನ್ ಮೂಲಕ ಅಸೆಸ್ ಮಾಡಿಸಬಹುದು. ಕಾಫೀ ಬೋರ್ಡಿನವರೂ ಎಷ್ಟು ಎಕರೆ ಕಾಫೀ ಪ್ಲಾಂಟೇಶ್ನ ನಾಶವಾಗಿದೆ ಯೆಂಬುದನ್ನು ತಿಳಿಸುತ್ತಾರೆ. ಸಣ್ಣಸಣ್ಣ ಕಾಫೀ ಪ್ಲಾಂಟರುಗಳಿಗೆ 5-10-15 ಎಕರೆ ನಾಶವಾಗಿದೆ. ಅಂಥವರುಗಳಿಗೆ ಕಾಫೀ ಬೋರ್ಡ್ ಮೂಲಕ ತಕಾವಿ ಲೋನನ್ನು ಫ್ರೀ ಆಫ್ ಇಂಟರೆಸ್ಟ್ ಕೊಡಬಹುದು.

ಯಾವ ತಾಲ್ಲೂಕಿನಲ್ಲಿ ಎಷ್ಟು ನಷ್ಟವಾಗಿದೆಯೆಂದು ನರ್ವೆಮಾಡಿ ರಿಪೋರ್ಟ್ ಮಾಡುವುದಕ್ಕೆ, ತಹಸೀಲು ದಾರರಿಗೆ ಟೆಂಪೊರರಿಯಾಗಿಯಾದರೂ ಒಂದು ಜೀಪು ಕೊಟ್ಟರೆ ಬಹಳ ತೀವ್ರವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ.

ನೂಪರಿಂಚೆಂಡಿಂಗ್ ಮತ್ತು ಎಕ್ಸಿಕ್ಯೂಟೀವ್ ಇಂಜ ನಿಯರುಗಳಿಗೆ ರಸ್ತೆ ಮುಂತಾದುವನ್ನು ರೆಸ್ಟೋರ್ ಮಾಡುವ ವಿಚಾರದಲ್ಲಿ ಹೆಚ್ಚಿಗೆ ಪವರ್ ಕೊಟ್ಟಿದ್ದೇ ವೆಂದು ಲೋಕೋಪಯೋಗಿ ಶಾಖೆಯ ಮಂತ್ರಿಗಳು ಹೇಳಿದರು. ಆದರೆ ಅವರಿಗೆ ಎಷ್ಟೆಷ್ಟು ಪವರು ಕೊಟ್ಟಿದೆಯೆಂಬುದನ್ನು ಹೇಳಲಿಲ್ಲ. ಅದು ಗೊತ್ತಿಲ್ಲ. ಟೆಂಪೊರರಿಯಾಗಿಯಾದರೂ, ಎಕ್ಸಿಕ್ಯೂಟಿವ್ ಇಂಜನಿ ಯರುಗಳಿಗೆ ಹೆಚ್ಚಿಗೆ ಪವರ್ ಕೊಡಬೇಕು. ಈ ಎಮರ್ಜೆನ್ಸಿಯಿಲ್ಲಾದರೂ ಅವರುಗಳೇ ಕೆಲಸಗಳನ್ನು ತೆಗೆದುಕೊಂಡು, ಪೂರ್ತಿಸಲು ಪವರ್ ಕೊಡ ಬೇಕು. ನೀವು ಎಕ್ಸಿಕ್ಯೂಟೀವ್ ಇಂಜನಿಯರಿಗೆ ಹೆಚ್ಚಿಗೆ ಪವರ್ ಕೊಟ್ಟಿದ್ದೇವೆಂದು ಹೇಳುತ್ತೀರಿ. ಕಳಸಕ್ಕೆ ಬಣಕಲ್ ಬ್ರಿಡ್ಜ್ ಮೇಲೆ ಹೋಗಬೇಕು. ಆ ಬ್ರಿಡ್ಜ್ ಹೋಗಿದೆ; ಹೋಗುವುದಕ್ಕಾಗುವುದಿಲ್ಲ. ಆದರೆ ಡಿಸ್ಟ್ರಿಕ್ಟ್ ಬೋರ್ಡ್ ರೋಡ್ ಮೂಲಕ ಹೋಗ ಬಹುದು; ಆ ರಸ್ತೆಯಲ್ಲಿಯೂ-ಜೀಪಿನಲ್ಲಿ ಮಾತ್ರ ಹೋಗಬಹುದು. ಆದನ್ನು ಸ್ವಲ್ಪ ಇಂಪ್ರೂವ್‌ಮಾಡಿ ಎಂದರೆ, ಎಕ್ಸಿಕ್ಯೂಟೀವ್ ಇಂಜಿನಿಯರು ತಮಗೆ ಡಿಸ್ಟ್ರಿಕ್ಟ್‌ಬೋರ್ಡ್ ಮತ್ತು ಪ್ರೈವೇಟ್ ರೋಡುಗಳ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪವರ್ ಇಲ್ಲ ವೆಂದು ಹೇಳಿದರು. ಟೆಂಪೊರರಿಯಾಗಿಯಾದರೂ ಈ ರಸ್ತೆಗಳ ಮೇಲೂ ಹಣ ಖರ್ಚುಮಾಡುವುದಕ್ಕೆ ಕೂಡಲೆ ಪವರ್ ಕೊಡುವುದು ಒಳ್ಳೆಯದು.

ರಾಜ್ಯದಲ್ಲಿ ಅಗತ್ಯವಾದ ತಾಲ್ಲೂಕುಗಳಲ್ಲಿ ಸಂಚಾರ ಮಾಡಿ, ಕಮ್ಯೂನಿಕೇಷನ್ನುಗಳು ಬ್ರಿಡ್ಜ್‌ಗಳು, ಅಣೆ ಕಟ್ಟುಗಳು ಮುಂತಾದುವು ಎಲ್ಲೆಲ್ಲ ಡ್ಯಾಮೇಜ್ ಆಗಿ ವೆಯೋ, ಅವುಗಳಿಗೆ ಕೂಡಲೆ ಅಂದಾಜುಗಳನ್ನು ತಯಾರುಮಾಡಿಸಿ, ರಿಪೇರಿಮಾಡಲು, ರೆಸ್ಟೋರ್ ಮಾಡಲು, ಇನ್‌ಸ್ಟ್ರಕ್ಷನ್ ಕೊಡಲು ಒಬ್ಬ ಸ್ಪೆಷಲ್ ಚೀಫ್ ಇಂಜನಿಯರನ್ನು ಅರು ತಿಂಗಳಮಟ್ಟಿಗಾದರೂ ಸ್ಯಾಂಕ್ಷನ್‌ಮಾಡಿ ನೇಮಕ ಮಾಡುವುದು ಬಹಳ ಸೂಕ್ತ.

ಮೂಡಿಗೆರೆ ತಾಲ್ಲೂಕಿಗೆ ಒಂದು ಸ್ಪೆಷಲ್ ಪಿ.ಡಬ್ಲ್ಯು.ಡಿ. ಸಬ್‌ಡಿವಿಜನ್ ಮಾಡಬೇಕೆಂದು ಹೇಳಿ ದ್ದಕ್ಕೆ ಮಾಡಿದ್ದೇವೆಂದು ಮಂತ್ರಿಗಳು ಹೇಳಿದರು, ಬಹಳ ಸಂತೋಷ. ಫಲ್ಗುಣಿ ಬ್ರಿಡ್ಜ್ ಹೋಗಿ, ಆ ಗ್ರಾಮ ಐಲೆಂಡ್ ಆಗಿಬಿಟ್ಟಿದೆ. ಅಲ್ಲಿ ಅನೇಕ ಗರ್ಭಿಣಿ ಹೆಂಗಸರು, ಖಾಯಿಲೆ ಜನಗಳು ಇದ್ದಾರೆ. ಅವರು ಹೊರಗೆ ಬರುವುದಕ್ಕೆ ಆಗಿಲ್ಲ. ಅವರು ಹೊರಗಡೆ ಬರುವುದಕ್ಕೆ, ಟೆಂಪೊರರಿಯಾಗಿಯಾದರೂ ದಿಮ್ಮಿ ಗಳಿಂದ ಒಂದು ಸೇತುವೆ ಕಟ್ಟುವ ಏರ್ಪಾಡು ಮಾಡ ಬೇಕು. ಸೇತುವೆ ಹೋಗಿರುವುದರಿಂದ ಹಳ್ಳಿಯ ಜನ ಗಳಿಗೆ ಬಹಳ ತೊಂದರೆಯಾಗಿಬಿಟ್ಟಿದೆ. ಏನಾದರೂ ಟೆಂಪೊರರಿ ಅರೇಂಜ್‌ಮೆಂಟ್ ಮಾಡಿ ಅವರುಗಳು ಹೊರಗಡೆ ಬರುವಂತೆ ಮಾಡಬೇಕು.

ಅನೇಕ ನದಿಗಳ ಮತ್ತು ಹಳ್ಳಗಳ ನೀರು ಫಲ್ಯೂಟ್ ಆಗಿದೆ. ಆ ನೀರನ್ನು ಕುಡಿಯುವುದಕ್ಕೆ ಉಪಯೋಗಿ ಸುವುದು ಜನಗಳ ಆರೋಗ್ಯಕ್ಕೆ ಹಾನಿಕರ. ಹೆಲ್ತ್ ಡಿಪಾರ್ಟ್‌ಮೆಂಟಿನವರು ಹೆಚ್ಚಿಗೆ ನಿಗಾ ತೆಗೆದು ಕೊಂಡು ಶುದ್ಧವಾದ ನೀರು ಸಿಕ್ಕುವ ಏರ್ಪಾಡು ಮಾಡಿಕೊಡಬೇಕು.

ಶ್ರೀ ಮರ್ಲಾರಾಧ್ಯರು, ಹೆಗ್ಡೆಯವರು ಹೇಳಿದ ಹಾಗೆ ಸೆಂಟ್ರಲ್ ಅಸಿಸ್ಟೆನ್ಸ್ ಕೇಳಬೇಕು. ಕೇಳುವು ದಕ್ಕೆ ಮೊದಲು ನಮಗೆ ಎಷ್ಟು ಹಣ ಬೇಕೆಂಬುದಕ್ಕೆ ಒಂದು ಎಸ್ಟಿಮೇಟ್ ಇರಬೇಕು. ಡಿಸ್ಟ್ರಿಕ್ಟ್‌ಮೆಸ್, ತಾಲ್ಲೂಕು ಮೆಸ್ ಬ್ರಿಡ್ಜಸ್ಸಿಗೆ, ಕಾಸ್ವೆಸ್ಸಿಗೆ, ಕಮ್ಯೂ ನಿಕೇಷನ್ನುಗಳಿಗೆ ಎಷ್ಟೆಷ್ಟು ಅನಾಹುತವಾಗಿದೆ ಯೆಂದು ಸ್ಟೇಟ್‌ಮೆಂಟ್‌ಮಾಡಿ ಸೆಂಟ್ರಲ್ ಗವರ್ನ್ ಮೆಂಟಿಗೆ ಕಳುಹಿಸಿ ಅಸಿಸ್ಟೆನ್ಸ್ ಕೇಳಬೇಕು. ಎರಡು ಕೋಟಿ, ಹತ್ತು ಕೋಟಿ, ನಾಲ್ಕು ಕೋಟಿ ಸಹಾಯ ಬೇಕೆಂದು ಸುಮ್ಮನೆ ಕೇಳುವ ಬದಲು, ನಿಖರವಾದ ಸ್ಟೇಟ್‌ಮೆಂಟ್ ಮಾಡಿ ಸೆಂಟರಿನಿಂದ ಸಹಾಯ ಕೇಳ ಬೇಕು. ಮೈನೂರು ರಾಜ್ಯದಲ್ಲಿ ಏನು ಅನಾಹುತ ವಾಗಿದೆಯೆಂಬುದು ಸೆಂಟ್ರಲ್ ಗವರ್ನ್‌ಮೆಂಟಿನ ಗಮನಕ್ಕೆ ಸರಿಯಾಗಿ ಬಂದಿದೆಯೋ ಇಲ್ಲವೋ ಎಂದು ಅನುಮಾನವಾಗುತ್ತಿದೆ. ಸೆಂಟ್ರಲ್ ಗವರ್ನ್‌ಮೆಂಟಿನ ಮಿನಿನ್ಟರುಗಳಾದ ಶ್ರೀ ಕೃಷ್ಣಮೆನನ್, ಜೈಶುಕ್ಲ ತಲ್ ಹತಿಯಾ ಹೆಫೀಜ್ ಮಹಮದ್ ಇಬ್ರಾಹಿಂರವರು ಕೇರಳಸ್ಟೇಟಿಗೆ, ಮದ್ರಾಸ್ ಸ್ಟೇಟಿಗೆ, ಮಹಾರಾಷ್ಟ್ರಕ್ಕೆ ಭೇಟಿ ಕೊಟ್ಟರು ಎಂದು ಪೇಪರಿನಲ್ಲಿ ಓದಿದ್ದೇವೆ. ಆದರೆ ಮೈನೂರಿಗೆ ಒಬ್ಬರೂ ಬರಲಿಲ್ಲ. ಮೈನೂರಿನ ಗ್ರಾವಟಿ ಆಫ್ ದಿ ಸಿಚುಯೇಷನ್ ಸೆಂಟ್ರಲ್ ಗವರ್ನ್‌ಮೆಂಟಿಗೆ ಮನವರಿಕೆಯಾಗಿದೆಯೋ ಇಲ್ಲವೋ ಎಂಬ

ಅನುಮಾನ ಬಂದಿದೆ. ಹೇಗಾದರೂ ಆಗಲಿ ನಾಳೆ ಪಂಡಿತ್ ನೆಹರುರವರು ಬೆಂಗಳೂರಿಗೆ ಬರುತ್ತಾರೆ. ಅವರ ಜೊತೆ ಅನೇಕ ಕೇಂದ್ರದ ಮಂತ್ರಿಗಳೂ ಬರುತ್ತಾರೆ. ಈ ಆಪರ್ಚುನಿಟಿಯನ್ನು ಉಪಯೋಗಿಸಿಕೊಂಡು, ನಮ್ಮ ಸರ್ಕಾರದವರು ಇಲ್ಲಿನ ಸ್ಥಿತಿಯನ್ನು ಅವರಿಗೆ ಮನದಟ್ಟಾಗುವ ಹಾಗೆ ವಿವರಿಸಬೇಕು. ರೋಕಸಭೆಯ ಎಸ್ಪಿಮೇಟ್ಸ್‌ಕಮಿಟಿ ಚೇರ್ಮನ್‌ರಾದ ಶ್ರೀ ದಾನಪ್ಪನವರೂ ರಾಜ್ಯದಲ್ಲಿ ಪ್ರವಾಸ ಕೈಗೊಂಡು ಒಂದು ವರದಿಯನ್ನು ತಯಾರಿಸಬೇಕೆಂದು ಈ ಸಭೆಯ ಮೂಲಕ ಅವರನ್ನು ಪ್ರಾರ್ಥನೆ ಮಾಡುತ್ತೇನೆ.

ಇಷ್ಟು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

*ಶ್ರೀ ಎಸ್. ವೈ. ಪಾಟೀಲ್ (ಸಿಂಧಿ).—ಮಾನ್ಯ ಅಧ್ಯಕ್ಷರೆ, ಇಪ್ಪೊತ್ತಿನ ದವನದ ಪ್ರವಾಹದ ಪರಿಸ್ಥಿತಿಯಿಂದ ಅತ್ಯಂತ ತೊಂದರೆಗೊಳಗಾದವರಿಗೆ ಸಹಾಯವನ್ನು ಕೊಡುವುದಕ್ಕೆ ಎಷ್ಟು ಶಕ್ಯವೋ ಅಷ್ಟನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದಕ್ಕಾಗಿ ಅವರನ್ನು ಅಭಿನಂದಿಸಿ, ಇನ್ನೂ ಮಾಡಬೇಕಾದ ಕೆಲಸ ಬಹಳ ವಿದೆಯೆಂದು ಹೇಳುತ್ತೇನೆ.

ಸಾಧಾರಣವಾಗಿ ಸಂಸ್ಥಾನದ ಅನೇಕ ಸ್ಥಳಗಳ ಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರನೇಕರು ಸಾಕಷ್ಟು ಹೇಳಿದ್ದಾರೆ. ಬಾಕಿ ಜಿಲ್ಲೆಗಳ ವಿಚಾರ ಹೇಳುವುದಕ್ಕೆ ಸಮಯವಿಲ್ಲದಿರುವುದರಿಂದ, ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುತ್ತಾ ಇದ್ದೇನೆ. ಮುಖ್ಯವಾಗಿ ಬಿಜಾಪುರ ಜಿಲ್ಲೆಯಲ್ಲಿ ಧನ್ನೂರು-ತಂಗಡಿ ಮಧ್ಯೇ ಅನಾಹುತವಾಗಿ ಎಷ್ಟೋ ಜನ ಪ್ರಾಣ ಕಳೆದುಕೊಂಡಿದ್ದಾರೆ. ಅವರುಗಳ ಬಗ್ಗೆ ಬರಿಯ ದುಃಖ ಸೂಚಿಸಿದರೆ ಸಾಲದು. ಬಿಜಾಪುರ-ಘೋಲಾಪುರ ಮಧ್ಯೇ ಇರುವ ಬ್ರಿಡ್ಜ್‌ಗಳಿಗೆ ವಿಶೇಷ ಲಕ್ಷ್ಯ ಕೊಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಎರಡನೆಯದು, ಸಿಂದಗಿ—ಎನ್ನುವ ಸ್ಥಳದಿಂದ ಇಂಡಿ ಎನ್ನುವ ಸ್ಥಳಕ್ಕೆ ಹೋಗುವ ರಸ್ತೆಯಲ್ಲಿ ಒಂದು ಸೇತುವೆ ಬರುತ್ತದೆ. ಇಲ್ಲಿ ಡೋಣಿ ನದಿಯೂ ಬರುತ್ತದೆ ಹಾಗೂ ಭೀಮಾ ನದಿಯೂ ಬರುತ್ತದೆ. ಹಿಂದೆ ಈ ನದಿಗಳು ಪ್ರವಾಹದಿಂದ ತುಂಬಿದ್ದಾಗ ಎಷ್ಟೋ ಜನ ತಮ್ಮ ಆಸ್ತಿಪಾಸ್ತಿಗಳನ್ನು ಮತ್ತು ದನಕರುಗಳನ್ನು ಕಳೆದುಕೊಂಡಿದ್ದಾರೆ. ಆದರೆ ಈ ಸಾರಿ ಪ್ರವಾಹ ಬರುವುದಕ್ಕೆ ಮುಂಚೆ ಈ ನದಿಯ ದಂಡೆಯಲ್ಲಿದ್ದ ಊರುಗಳ ಜನರು ಬೇರೆ ಕಡೆಗೆ ಬಂದಿದ್ದರಿಂದ ಅಷ್ಟು ಅನಾಹುತವಾಗಲಿಲ್ಲ. ಅವರುಗಳಿಗೆ ಸರಕಾರದ ಕಡೆಯಿಂದ ಸಾಲಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ. ಆದರಲ್ಲಿಯೂ 20-30 ಹಳ್ಳಿಗಳ ಜನಕ್ಕೆ ಬಹಳ ತೊಂದರೆಯಾಗಿದೆ. ಬಾಗೇವಾಡಿಯ ಬಳಿ ಇರುವ ಕೆಲವು ಹಳ್ಳಿಗಳು ಮತ್ತು ಡೋಣಿ ನದಿಯ ದಂಡೆಯಲ್ಲಿರುವ ಕೆಲವು ಹಳ್ಳಿಗಳಲ್ಲದ್ದ ಜನ ಮುಂಚಿತವಾಗಿಯೇ ಮುನ್ನೆಚ್ಚರಿಕೆ ವಹಿಸಿ ಊರು ಬಿಟ್ಟು ಬೇರೆ ಕಡೆಗೆ ಹೋಗಿದ್ದಾರೆ, ಇಂತಹ ಜನಕ್ಕೆ ಸುಮಾರು 20-30 ಲಕ್ಷ ರೂಪಾಯಿಗಳಷ್ಟು ಹಣವನ್ನು ಸಾಲವಾಗಿ ಕೊಟ್ಟಿದ್ದಾರೆ; ಇಲ್ಲಿರುವ ಹರಿಜನರು ವಸತಿಮಾಡಿಕೊಳ್ಳಲು ಗಾವಠಾಣ ಕೊಟ್ಟಿದ್ದಾರೆ. ಸುದ್ದಿವದಿಂದ ಈ ಹಳ್ಳಿಗಳ ಜನರನ್ನು ನದಿಗಳಲ್ಲಿ ಪ್ರವಾಹ ಬರುವ ಮುನ್ನ ಬೇರೆ ಕಡೆಗೆ ಹೋಗುವಂತೆ ಅವಕಾಶ ಮಾಡಲು ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು, ನಾನು ಮತ್ತು ಸುರಪುರದವರು ಎಲ್ಲರೂ ಹೋಗಿ ಸಹಾಯಮಾಡಿದುದರಿಂದ ಹೊಳೆಯಲ್ಲಿ ಹೆಚ್ಚು ನೀರು ಬಂದರೂ ಅವರಿಗೆ ಏನೂ ತೊಂದರೆಯಾಗಲಿಲ್ಲ. ಆದುದರಿಂದ ಇನ್ನೂ ಮುಂದೆ ಪ್ರವಾಹದ ದೆಸೆಯಿಂದ ಜನಗಳಿಗೆ ತೊಂದರೆಯಾಗದಂತೆ ಸರಿಯಾಗಿ ನೋಡಿಕೊಳ್ಳಬೇಕು ಮತ್ತು ಈ ಬಡಜನರಿಗೆ ಸಹಾಯ ಮಾಡಬೇಕು ಎಂದು, ಇಲ್ಲಿ ಹೇಳುತ್ತೇನೆ. ಹಣವಂತರ ಸ್ಥಿತಿ ಹೇಗೋ ಆಗುತ್ತದೆ. ಬಡವರಾಗಿರುವ ಈ ಜನಕ್ಕೆ ಸಾಲವನ್ನು ಕೊಟ್ಟು ಇವರನ್ನು ಸುಧಾರಿಸಲಿಕ್ಕೆ ತಕ್ಕ ಪ್ರಯತ್ನ ಮಾಡಬೇಕು. ಡೋಣಿ ನದಿಯ ಪ್ರವಾಹದಿಂದ ಎಷ್ಟೋ ಜನ ಮನೆಗಳನ್ನು ಕಳೆದುಕೊಂಡಿದ್ದಾರೆ. ಅವರಿಗೆ ಬೇರೆ ಕಡೆಗಳಲ್ಲಿ ತಂಗಲು ತಕ್ಕ ವ್ಯವಸ್ಥೆ ಮಾಡುವುದು ಅಗತ್ಯ. ಬಳ್ಳಾರಿ-ಘೋಲಾಪುರ ರಸ್ತೆ ಬಹಳ ದೊಡ್ಡದು. ಈಗ ಇದು ಹಾಳಾಗಿ ಹೋಗಿದೆ. ಸರಕಾರದವರು ಇದನ್ನು ಕೂಡಲೆ ಸರಿಪಡಿಸಬೇಕು ಮತ್ತು ಈ ಬಿಜಾಪುರ ಜಿಲ್ಲೆಗೆ ಸೌಕರ್ಯ ಮಾಡಿಕೊಡಬೇಕು. ಇದರ ಕಡೆಗೆ ಸರಕಾರ ತೀವ್ರ ಲಕ್ಷ್ಯ ಕೊಟ್ಟು, ತೊಂದರೆಗೆ ಸಿಕ್ಕಿರುವ ಜನಕ್ಕೆ ತಕ್ಕ ಕೆಲಸಗಳನ್ನು ಕೊಟ್ಟು ಸಹಾಯ ಮಾಡುವ ಆವಶ್ಯಕತೆ ಇದೆ. ಇದಕ್ಕಾಗಿ ಸರಕಾರದವರು ಹಣದ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡದೇ ವ್ಯಾವಹಾರಿಕ ದೃಷ್ಟಿಯಿಂದ ಇವನ್ನೆಲ್ಲಾ ಸರಿಯಾಗಿ ಪರಿಶೀಲನೆ ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

*Sri K. P. KARUMBAYYA (Virajpet).—Mr. Speaker, Sir, many parts of Coorg too had this year unprecedented, unusual and I should say uneven rains. It has been already 162 inches up till now. This is the figure for the period from 30th June to 6th July when at Mercara alone it recorded about 64". So, as I said, it is uneven for the reason that in certain parts of Virajpet Taluka, particularly in two villages, the rainfall for six days was 90 inches. From this it could be inferred what amount of calamity, and what amount of damages it could have been caused to the people round about Coorg, but, unfortunately for us, neither the Press has given sufficient publicity nor has the Revenue Minister said much about the havoc that occurred in Coorg. The Revenue Minister has given the affected acreage of wet lands in Coorg as 1,000 acres. In Coorg we have got about 1,10,000 acres of paddy fields of which if only 1,000 acres have been affected according to the version of the Government, it would mean only less than 1%.

Sri KADIDAL MANJAPPA.—Sir, yesterday some hon'ble members requested me to distribute copies of the Government Order regarding relief measures. I have got the copies ready and they may be distributed.

Mr. SPEAKER.—They will be distributed.

Sri K. P. KARUMBAYYA.—The affected area in Virajpet Taluk alone comes to about 56,000 acres. At the meeting of the District Development Council when all the Tahsildars and the Block Development Officers were present and also the Presidents of the Taluk Boards were present, without any contradiction it came to the conclusion that in Virajpet Taluk alone about 80,500 acres of wet lands had been affected. Then out of 26,000 acres in Marcara taluk about 8000 acres have been affected.

As regards the nature of the damage caused to the lands, I need not describe the same as it has been the same everywhere. There have been breaches of roads and bunds and deposit of sand on lands; streams and rivulets have changed their normal courses and are going straight right through fields and have made deep pits and furrows in the fields. Therefore, the damage has been colossal. Most of the fields had been ploughed 3 or 4 times and were ready for transplantation of seedlings, but unfortunately on account of the rains all the manure has been washed away and there has been considerable erosion. Even if an earnest attempt is made to reclaim those lands, that cannot possibly be done in the course of this year itself and it would take not less than 3 to 5 years to restore them to normal condition.

In addition to the paddy fields, communications also have been hopelessly dislocated with the result that Coorg has divided itself into so many parts or islands. Prices shot up as high as anything. A coconut was selling at Re. 1 and one viss of sugar was selling at Rs. 2-50 in some parts. In the case of people who unfortunately buy rice and other things, for their daily consumption. God alone knows what their plight was during those fateful days. Not only inter-State communications have been dislocated but inter-district communications also have been dislocated. Virajpet to Coorg—a distance of 20 miles—one took not less than 3 hours even by the shortest route. Similarly the road to Tellicherry was closed for more than a fortnight. The road from Mercara to Mangalore was also closed and is still closed and is not capable of being restored to normalcy as was admitted by the Government itself.

A large number of houses and huts have been destroyed. It is stated by the Minister concerned that about 124 houses have been damaged by the recent floods, but it has come to our notice that at least not less than 400 houses have actually collapsed. These were the houses owned by Muslims on the banks of the Cauvery. Some of the mountain hills gave way with the result that about 77 families in the village of Mangoli have become houseless. The houses of the several middle class families also have collapsed and they are beyond reclamation. Similarly, I need not dilate upon the extent of cattle mortality. We are thankful to God for one thing, that is in Coorg there has not been any casualty of human lives.

There was said to be only one man who died and that too in the course of his attempt to cross the Cauvery by swimming. Many families providentially escaped and have outlived this calamity. For example in Magula village, just at 6-30 A.M. a house collapsed, though there were nine people in the house half an hour before this incident and they had a feeling that the land might sink. Similarly in one village in Kirgoor, about 11 members just got out of their house having heard a rumbling at 1-30 and fifteen minutes after, the house collapsed. Though there have not been any casualties so far as human lives are concerned, the loss and damage to property is colossal indeed.

So far, having given an account of the calamities and the ravages of this monsoon—ravages which some people have compared to the devastation of a war—I try to present an assessment of the damages caused. In the presence of the Deputy Commissioners, the Tahsildars and other people, one of the Revenue Inspectors who went to a certain village to assess the extent of damage, said that 97 ryots in that village had been affected and not less than 1 lakh

40 thousand rupees would be required to restore their lands to normalcy. If, that is so in respect of one village, how much money would be necessary to restore to normalcy, about 18 thousand acres of land affected in Virajpet taluk and 8 thousand acres in Mercara taluk so far as paddy fields are concerned and also as for damages that have occurred to people owning coffee, cardamom and orange estates, that is anybody's guess. Practically a mountain has moved from an elevated place to a plain. Government have announced that the amount that has been made available by way of distribution among the people in the Mysore Division, as interest-free taccavi loans, is about 20 lakhs. According to a modest computation, so far as my district of Coorg is concerned, though many people who have sustained heavy damage may not apply for such loans, the irreducible minimum that would be required for, Coorg District as a whole, according to the computation of the Deputy Commissioner and other Revenue Officers and responsible Members of this House who are sitting here, is about 5 to 6 lakhs of rupees in Virajpet taluk, 2½ lakhs for Mercara and about 50 thousand to 1 lakh in Somwarpet taluk. My only submission is that this amount may be made available at once. Speed is the most important thing that has to be borne in mind in the distribution of this amount. It should be remembered that so far as Coorg is concerned, it is a place where the ryots depend not upon an assured supply of water but upon the rains. So far as transplantation of paddy is concerned that should be completed by the end of what is called 'Karkataka thingalu'. by the 15th of August at the most. Even the seeds that are distributed now are useless because they have been hoplessly damaged by the floods. Even if they are supplied now, it will take more than a month for them to be transplanted. If it is the desire of the Government to help these poor people, to reclaim their land and to see that transplantation takes place, it should be done by the end of August because if it is to be done in September or October, it would be of no use, unlike the practice obtaining in the plains, where the lands are having an assured supply of water. This distribution of 5 or 10 lakhs would not be of any use so far as the poor ryots are concerned. I am constrained to say that the experience of our district has been that the help rendered by the Government often reaches the persons for whom it is intended rather late and there has been inordinate delay in this matter. If that is to happen in this particular case, I submit that the hardships of the people, to keep themselves going by producing crops, would be immeasurable and this district which has been producing a surplus so far would be in deficit. I, therefore, urge upon the Government that speed should be the motto and that the whole thing should be tackled, as one of the leaders of the Congress said, on a warfooting.

So far as fertilisers that are necessary for the district are concerned, they have been washed away on a considerable scale. I understand that Coorg had about 15 thousand tons of fertilisers. My submission is that if these fertilisers could not be distributed free, at least they can be given at a subsidised rate. They can be given without any interest for the value of the fertilisers and the amount may be recovered after 2 or 3 years, free of interest. Otherwise there is no point even in transplanting when manures andf ertilisers have been completely washed out and where considerable erosion has stalked the land on account of 90 inches of rains within 6 or 7 days.

So far as distribution of seeds is concerned, I am very thankful to the Government because they have taken speedy action and many poor people who lost their seedlings on account of their being under water for days together, have been able to get quick relief from the Government.

I was submitting that it was our information that not less than 400 houses had been destroyed of which many were houses of the people belonging to scheduled castes. There has been a proposal to rehabilitate them. They are being given 3 to 5 acres of land in a place like Channaur

(SRI K. P. KARUMBAYYA)

where the rainsfall is 200 inches. There is no point in shifting these people to a distance of 7 to 8 miles and trying to rehabilitate them in a place where they will not be able to grow any annual crop, the only crops possible there being cardamom and coffee. So far as these scheduled castes are concerned, somehow they must be at least granted 2 to 3 acres of land which are capable of being cultivated with paddy and a certain amount of dry land. Unless this is given, no purpose will be served by granting 3 to 5 acres of land and granting house building materials at a place where there has been a rainfall of 150 to 200 inches. Many of the middle class people have lost their houses because of landslides. They are people, who according to my information, have constructed houses in recent years. Such of those people who have lost their houses costing 10 to 15 thousand rupees, and who are not in a position to reconstruct them, should be given long-term interest-free loans so that they can construct dwelling houses on their own and live there. Otherwise, they are bound to feel that in these days of natural calamity, there was none to look after their interests and give them succour.

